# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ:07.11.2020 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ನಂ.16 ಜಾಲಹಳ್ಳಿಯಲ್ಲಿ ಶ್ರೀ ಹೆಚ್. ಎಸ್. ದಯಾನಂದ, (ಸ.ಕಾ.ನಿ.ಅ,ಕೆಂಗೇರಿ) ನೋಡಲ್ ಅಧಿಕಾರಿರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

ಹಾಜರಿದ್ದವರು:-

| ಕ್ರಮ ಸಂಖ್ಯೆ | ಅಧ್ಯಕ್ಷರು / ಸದಸ್ಯರ ಹೆಸರು | ಪದನಾಮ / ಇಲಾಖೆ |
|---|---|---|
| 1 | ಶ್ರೀ ಹೆಚ್. ಎಸ್. ದಯಾನಂದ | ಸ.ಕಾ.ನಿ.ಅ., ವಾರ್ಡ್ ನೋಡಲ್ ಅಧಿಕಾರಿಗಳು |
| 2 | ಶ್ರೀ ಗಿರೀಶ ಹೆಚ್. ಎನ್. | ಸಹಾಯಕ ಅಭಿಯಂತರರು, ಸದಸ್ಯ ಕಾರ್ಯದರ್ಶಿ |
| 3 | ಶ್ರೀ ರಘುನಾಥ್ ಟಿ. | ಹಿರಿಯ ಆರೋಗ್ಯ ಪರಿವೀಕ್ಷಕರು |
| 4 | ಶ್ರೀ ರವಿಕುಮಾರ್. | ಕಿರಿಯ ಆರೋಗ್ಯ ಪರಿವೀಕ್ಷಕರು |
| 5 | ಶ್ರೀ ವೇಣು | ಕಂದಾಯ ವಸೂಲಿಗಾರರು |
| 6 | ಶ್ರೀಮತಿ ಮಂಗಳ ಡಿ. | ಪಿ.ಎಸ್.ಐ., ಜಾಲಹಳ್ಳಿ ಪೋಲೀಸ್ ಠಾಣೆ |
| 7 | ಶ್ರೀ ಪ್ರದೀಪ್ | ಕಿರಿಯ ಅಭಿಯಂತರರು, ಬೆಸ್ಕಾಂ |
| 8 | ಶ್ರೀ ಮಂಜುನಾಥ್ ಡಿ. ಹೆಚ್. | ವಾಟರ್ ಇನ್ಸ್‌ಪೆಕ್ಟರ್ |
| 9 | ಶ್ರೀ ಮುನಿರಾಜು ವೈ. | ವಾರ್ಡ್ ಮಾರ್ಷಲ್ |

ಮಾನ್ಯ ಅಧ್ಯಕ್ಷರ ಸ್ವಾಗತದೊಂದಿಗೆ ಅಧಿಕಾರಿಗಳು / ಹಾಜರಿದ್ದವರ ಪರಸ್ಪರ ಪರಿಚಯದೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

1) ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:-

- ರಾಜರಾಜೇಶ್ವರಿನಗರ ವಿಧಾನ ಸಭಾ ಕ್ಷೇತ್ರದ ಉಪ ಚುನಾವಣೆ ಕರ್ತವ್ಯಕ್ಕೆ ಹಾಜರಾಗಿರುವ ಎಲ್ಲಾ ಅಧಿಕಾರಿ / ಸಿಬ್ಬಂದಿ ವರ್ಗದವರು ಕಡ್ಡಾಯವಾಗಿ ಕೋವಿಡ್-19 ಪರೀಕ್ಷೆ ಮಾಡಿಸಲು ಸೂಚಿಸಿರುತ್ತಾರೆ.

- ಜಾಲಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಕೋವಿಡ್ ಪರೀಕ್ಷೆಯ ವಿವರಗಳನ್ನು ಸಭೆಯಲ್ಲಿ ಮಂಡಿಸಿದರು.

ಹಿಂದಿನ ಸಭೆಯಲ್ಲಿ ಚರ್ಚಿಸಿದಂತೆ, ಜಾಲಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸ್ವಯಂ ಪ್ರೇರಿತರಾಗಿ ರೋಗ ಲಕ್ಷಣಗಳಿರುವ ಸುಮಾರು 60 ಜನರಿಗೆ ಹಾಗೂ ಇತರ ಪ್ರದೇಶಗಳಲ್ಲಿ ಸುಮಾರು 175 ರಿಂದ 200 ಜನರಿಗೆ ಪ್ರತಿದಿನ ಕೋವಿಡ್ ಪರೀಕ್ಷೆ ನಡೆಸುತ್ತಿರುವುದಾಗಿ ಹಾಗೂ ಪರೀಕ್ಷಾ ಪ್ರಕ್ರಿಯೆಯನ್ನು ಮುಂದುವರೆಸಲು ತೀರ್ಮಾನಿಸಲಾಯಿತು.

ಮು.ತಿ.ನೋ....2

2020/11/13 11

ಅಧ್ಯಕ್ಷರು ಮಾತನಾಡಿ, ಹಿಂದಿನ ಸಭೆಯಲ್ಲಿ ನಿರ್ಣಯಿಸಿದಂತೆಯೇ, ತಾತ್ಕಾಲಿಕ ಪರೀಕ್ಷಾ ಕೇಂದ್ರಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರದ ಜೊತೆಗೆ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವ ಸ್ಥಳಗಳಾದ ಪೋಲೀಸ್ ಠಾಣೆ ಹತ್ತಿರ, ದೊಡ್ಡ ತರಕಾರಿ ಅಂಗಡಿಗಳ ಸಮೀಪ ಮತ್ತು ಜಾಲಹಳ್ಳಿ ವೃತ್ತದ ಬಳಿ ಕ್ಯಾಂಪ್‌ಗಳನ್ನು ಹಮ್ಮಿಕೊಂಡು ಹೆಚ್ಚಿನ ಪರೀಕ್ಷೆ ನಡೆಸುವುದನ್ನು ಮುಂದುವರೆಸಲು ಸೂಚಿಸಿದರು.

ಕಡ್ಡಾಯವಾಗಿ ಮಾಸ್ಕ್ ಧರಿಸುವಂತೆ ಜನಜಾಗೃತಿ ಮೂಡಿಸಲು ಧ್ವನಿವರ್ಧಕವಿರುವ ಆಟೋಗಳಲ್ಲಿ ಸಾಯಂಕಾಲ 5 ರಿಂದ 7 ಗಂಟೆಯವರೆಗೆ ಜನ ನಿಬಿಡ ಪ್ರದೇಶಗಳಲ್ಲಿ ಪ್ರಚಾರ ಮಾಡಲು ವ್ಯವಸ್ಥೆ ಮಾಡುವಂತೆ ಹಿರಿಯ ಆರೋಗ್ಯ ಪರಿವೀಕ್ಷಕರು ಹಾಗೂ ಘನತ್ಯಾಜ್ಯದ ಗುತ್ತಿಗೆದಾರರಿಗೆ ಸೂಚಿಸಿದರು. ಜೊತೆಗೆ ಬೀದಿ ಬೀದಿಗಳಲ್ಲಿ ತಳ್ಳುವ ಗಾಡಿ ಮತ್ತು ಇತರೆ ವಾಣಿಜ್ಯ ಚಟುವಟಿಕೆದಾರರಿಗೆ ತ್ಯಾಜ್ಯವನ್ನು ಸೂಕ್ತವಾಗಿ ವಿಲೇವಾರಿ ಮಾಡುವಂತೆ ಜಾಗೃತಿ ಮೂಡಿಸಲು ಸೂಚಿಸಿದರು.

- ಕೋವಿಡ್ ಟೆಸ್ಟ್ ಮಾಡಲು ಪ್ರಾ.ಆ.ಕೇಂ. ಇಲ್ಲಿ ಶೆಡ್ ನಿರ್ಮಾಣ ಮಾಡುವ ಬಗ್ಗೆ ಹಿಂದಿನ ಸಭೆಯಲ್ಲಿ ಚರ್ಚಿಸಲಾಗಿದ್ದು, ಶೆಡ್ ಬದಲಿಗೆ ಕೆನೋಪಿಯನ್ನು ಅಳವಡಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಹಾಗೂ ಹೋಮ್ ಐಸೋಲೇಷನ್‌ಗೆ ಒಳಗಾದ ಕೊರೊನಾ ರೋಗಿಗಳಿಗೆ ಅವಶ್ಯಕ ಔಷಧಿಗಳನ್ನು ಒದಗಿಸುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಮಾನ್ಯ ಅಧ್ಯಕ್ಷರು ಮಾತನಾಡಿ, ಪ್ರಸ್ತಾಪಿತ ವಿಷಯದ ಬಗ್ಗೆ ಕೋವಿಡ್ ನಿರ್ವಹಣೆಗಾಗಿ ಬಿಬಿಎಂಪಿಯ ಅನುದಾನದಡಿಯಲ್ಲಿ ಅನುವು ಮಾಡಿಕೊಡಲು ಮತ್ತೊಮ್ಮೆ ಸೂಚಿಸಿರುತ್ತಾರೆ.

<u>2) ಬೀದಿ ದೀಪಗಳಿಗೆ ಹೊಸ ಲೈನ್‌ಗಳನ್ನು ಅಳವಡಿಸುವ ಬಗ್ಗೆ ಹಾಗೂ ಸಿ.ಸಿ. ಟಿವಿ ನಿರ್ವಹಣೆ ಕುರಿತು:-</u>

ಹೊಸದಾಗಿ ಬೀದಿ ದೀಪಗಳಿಗೆ ಲೈನ್ ಅನ್ನು ಅಳವಡಿಸಲು ಸಂಬಂಧಪಟ್ಟ ಸಹಾಯಕ ಅಭಿಯಂತರರು, ವಿದ್ಯುತ್ ವಿಭಾಗ, ರಾ. ರಾ. ನಗರ ವಲಯ, ಬಿಬಿಎಂಪಿ ರವರಿಗೆ ಕ್ರಮವಹಿಸಲು ಸೂಚಿಸಿರುತ್ತಾರೆ.

<u>3) ಬ್ಲ್ಯಾಕ್ ಸ್ಪಾಟ್ (ಘನತ್ಯಾಜ್ಯ) ಗಳ ನಿರ್ವಹಣೆ ಹಾಗೂ ಬಯೋ ಮೆಡಿಕಲ್ ವೇಸ್ಟ್ ನಿರ್ವಹಣೆ ಕುರಿತು:-</u>

ಜಾಲಹಳ್ಳಿ ವಾರ್ಡ್‌ನಲ್ಲಿ ತ್ಯಾಜ್ಯ ನಿರ್ವಹಣೆಯ ಬಗ್ಗೆ ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ, ವಾರ್ಡ್‌ನಲ್ಲಿ ಪ್ರತಿದಿನ ಕಸ ವಿಲೇವಾರಿ ಕಾರ್ಯವು ಸಮರ್ಪಕವಾಗಿ ನಿರ್ವಹಿಸುತ್ತಿರುವುದಾಗಿ ತಿಳಿಸಿರುತ್ತಾರೆ.

ಮಾನ್ಯ ಅಧ್ಯಕ್ಷರು ಮಾತನಾಡಿ ಬ್ಲ್ಯಾಕ್ ಸ್ಪಾಟ್ ಸ್ಥಳಗಳಲ್ಲಿ ಔಷಧಿ ಸಿಂಪಡಣೆ ಮಾಡಲು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಲಾಗಿರುತ್ತದೆ. ಘನತ್ಯಾಜ್ಯ ಇಲಾಖೆಯ ನಿರ್ವಹಣೆ ಅಧಿಕಾರಿಗಳು ಮತ್ತು ಮೇಲ್ವಿಚಾರಕರು ಬ್ಲ್ಯಾಕ್‌ಸ್ಪಾಟ್ ಸ್ಥಳಗಳಲ್ಲಿ ರಾತ್ರಿ ಹೊತ್ತು ಕಸ ಸುರಿಯುವವರಿಗೆ ದಂಡ ವಿಧಿಸಲು ಸಭೆಯಲ್ಲಿ ಸೂಚಿಸಿರುತ್ತಾರೆ. ಹಾಗೂ ವಾರ್ಡ್ ಪರಿಮಿತಿಯಲ್ಲಿ ಸಂಗ್ರಹವಾಗುವಂತಹ ತ್ಯಾಜ್ಯಗಳನ್ನು ವಿಂಗಡಿಸಿ (ಒಣ ಕಸ ಮತ್ತು ಹಸಿ ಕಸ) ವಿಲೇವಾರಿ ಮಾಡಲು ಸೂಚಿಸಿರುತ್ತಾರೆ.

2020/11/13 11:40

....3

ಪ್ರಾಥಮಿಕ ಆರೋಗ್ಯ ಕೇಂದ್ರದ ಮೇಲ್ಮಹಡಿಯಲ್ಲಿನ ಕಸವನ್ನು ಸ್ವಚ್ಛಗೊಳಿಸಲು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸಭೆಯಲ್ಲಿ ಸೂಚಿಸಿರುತ್ತಾರೆ.

ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ, 'ಸಹಾಯ' ಕೋಶದಲ್ಲಿ ದಾಖಲಾಗಿರುವ ಆರೋಗ್ಯ ಇಲಾಖೆಗೆ ಸಂಬಂಧಿಸಿದ ಸಾರ್ವಜನಿಕರ ದೂರುಗಳನ್ನು ವಿಲೇ ಮಾಡಲಾಗಿರುತ್ತದೆ ಎಂದು ಸಭೆಗೆ ತಿಳಿಸಿರುತ್ತಾರೆ.

4) ಪೌರ ಕಾರ್ಮಿಕರ ಆರೋಗ್ಯದ ಬಗ್ಗೆ:

ಹಿಂದಿನ ಸಭೆಯಲ್ಲಿ ನಿರ್ಣಯಿಸಿದಂತೆಯೇ, ಪೌರ ಕಾರ್ಮಿಕರಿಗೆ ಪ್ರತಿ ತಿಂಗಳು ಕೋವಿಡ್ ಟೆಸ್ಟ್ ಮಾಡಿಸಲು ಸೂಚಿಸಿರುತ್ತಾರೆ. ಮಾನ್ಯ ಅಧ್ಯಕ್ಷರು ಮಾತನಾಡಿ, ಆಯುಕ್ತರು, ಬಿಬಿಎಂಪಿರವರ ಆದೇಶದನ್ವಯ ಪೌರ ಕಾರ್ಮಿಕರಿಗೆ ಪ್ರತಿ ತಿಂಗಳು ಕೋವಿಡ್ ಟೆಸ್ಟ್ ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಪೌರ ಕಾರ್ಮಿಕರ ಆರೋಗ್ಯದ ಹಿತದೃಷ್ಟಿಯಿಂದ, ಪೌರ ಕಾರ್ಮಿಕ ಸಿಬ್ಬಂದಿಗಳಿಗೆ ಮಾಸ್ಕ್, ಗ್ಲೌಸ್ ಹಾಗು ಸ್ಯಾನಿಟೈಸರ್‌ಗಳನ್ನು ವಿತರಿಸಲು ಅಧ್ಯಕ್ಷರು ಸಭೆಯಲ್ಲಿ ಸೂಚಿಸಿರುತ್ತಾರೆ.

5) ಬೀದಿ ನಾಯಿಗಳ ಬಗ್ಗೆ:-

ಹಿಂದಿನ ಸಭೆಯಲ್ಲಿ ಚರ್ಚಿಸಿದಂತೆಯೇ, ವಾರ್ಡ್ ಪರಿಮಿತಿಯಲ್ಲಿ ಬೀದಿ ನಾಯಿಗಳ ಕಾಟ ಅತಿಯಾಗಿದ್ದು, ಸಾರ್ವಜನಿಕರಿಗೆ ಇದರಿಂದ ತೊಂದರೆಯಾಗುತ್ತಿದ್ದು, ಇವುಗಳ ನಿಯಂತ್ರಣಕ್ಕಾಗಿ, ಬಿಬಿಎಂಪಿ ಪಶುಪಾಲನಾ ವಿಭಾಗರವರಿಗೆ ಕ್ರಮವಹಿಸಲು ಸೂಚಿಸಿರುತ್ತಾರೆ.

6) ಕಾಮಗಾರಿ ಇಲಾಖೆ:-

- 'ಸಹಾಯ 2.0' ಕೋಶದಲ್ಲಿ ದಾಖಲಾಗುವ ಸಾರ್ವಜನಿಕರ ದೂರುಗಳನ್ನು ವಿಲೇ ಮಾಡುವ ಬಗ್ಗೆ ಚರ್ಚಿಸಲಾಗಿದ್ದು, ಕಾಮಗಾರಿ ಇಲಾಖೆಗೆ ಸಂಬಂಧಪಟ್ಟ ದೂರುಗಳು ಬಾಕಿ ಇದ್ದು, ಇದರ ಬಗ್ಗೆ ವಾರ್ಡ್ ಸಹಾಯಕ ಅಭಿಯಂತರರು ಮಾತನಾಡಿ, ದೂರುಗಳನ್ನು ಶೀಘ್ರವಾಗಿ ಪರಿಹರಿಸುವುದಾಗಿ ಸಭೆಗೆ ತಿಳಿಸಿರುತ್ತಾರೆ.



2020/11/13 11:40

ಕೊನೆಯದಾಗಿ ಅಧ್ಯಕ್ಷರು ಮಾತನಾಡಿ. ವಾರ್ಡ್ ವ್ಯಾಪ್ತಿಯಲ್ಲಿ ಸಾರ್ವಜನಿಕರ ಸಮಸ್ಯೆ / ದೂರುಗಳನ್ನು ದಾಖಲಿಸಲು ವಾರ್ಡ್ ನಲ್ಲಿ ದೂರು ದಾಖಲಿಸುವ ಪುಸ್ತಕ ಲಭ್ಯವಿರುವಂತೆ ನೋಡಿಕೊಂಡು ಬರುವ ದೂರುಗಳನ್ನು ಆದ್ಯತೆಯ ಮೇರೆಗೆ ಕ್ರಮವಹಿಸುವಂತೆ ಹಾಗೂ ಪ್ರತಿ ವಾರ ಸಾಮೂಹಿಕ ಸ್ವಚ್ಛತಾ ಕಾರ್ಯಕ್ರಮವನ್ನು ಮುಂದುವರೆಸುಂತೆ ಸೂಚಿಸುತ್ತಾ, ಸಕಾಲದಲ್ಲಿ ಸಾರ್ವಜನಿಕ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ಕೈಗೊಂಡು ಇಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿದರು.

ಮೇಲ್ಕಂಡ ಸಮಸ್ಯೆಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ, ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಗಿರೀಶ ಹೆಚ್. ಎನ್.)
ಸಹಾಯಕ ಅಭಿಯಂತರರು ಹಾಗೂ
ಸದಸ್ಯ ಕಾರ್ಯದರ್ಶಿ
ವಾರ್ಡ್ ಸಂಖ್ಯೆ:16

(ಹೆಚ್. ಎಸ್. ದಯಾನಂದ)
ಸ.ಕಾ.ನಿ.ಅ. ಹಾಗೂ
ವಾರ್ಡ್ ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ:16